ಒ.ಎಸ್.ನಂಬ್ರಃ 68/2024
ಪಿ.ಡಬ್ಲ್ಯೂ ಃ 1

ದಿನಾಂಕಃ 03-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ **4 ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಹೆಚ್ ವಕೀಲರಿಂದ**

**5.** ನಮ್ಮ ಮನೆಗೆ ಹೋಗುವ ರಸ್ತೆ ಶ್ರೀ ಅಜಮಹಾವಿಷ್ಣು ದೇವಸ್ಥಾನದಿಂದ ಯಕ್ಷಿ ಪರಿವಾರ ದೈವ ಸ್ಥಾನಕ್ಕೆ ಹೋಗುವ ದಾರಿಯಲ್ಲಿ ಸಿಮೆಂಟ್ ರಸ್ತೆ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೋ ಒಂದು ಅಚ್ಯುತ ಪೂಜಾರಿಯವರ ಹಳೇ ಮನೆಯ ದೇವಸ್ಥಾನದ ಪಕ್ಕದಲ್ಲೇ ಇರುತ್ತದೆ. ಸಾಕ್ಷಿ ಸಿಮೆಂಟ್ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಯಕ್ಷಿ ಪರಿವಾರ ದೈವ ಸ್ಥಾನದಿಂದ ನಮ್ಮ ಮನೆಗೆ ಹೊಗಲು ಕಾಂಕ್ರಿಟ್ ರಸ್ತೆ ಇದೆಯಾ ಎಂದರೆ ಸಾಕ್ಷಿ ಯಕ್ಷಿ ಪರಿವಾರ ದೈವ ಬಲಗಡೆ ಇರುತ್ತದೆ ಎಂದು ನುಡಿಯುತ್ತಾರೆ. ಯಕ್ಷಿ ಪರಿವಾರ ದೈವ ಸ್ಥಾನದಿಂದ ನಮ್ಮ್ಮ ಮನೆಗೆ ರಸ್ತೆ ಇರುವುದಿಲ್ಲ, ಅಜಮಹಾವಿಷ್ಣು ದೇವಸ್ಥಾನದಿಂದನಮ್ಮ ಮನಗೆ ರಸ್ತೆ ಇದೆ ಎಂದು ನುಡಿಯುತ್ತಾರೆ.

6. ಕಾಂಕ್ರಿಟ್ ರಸ್ತೆ ಆದ ನಂತರ ರಾಮಕೃಷ್ಣ  ಕಾರಂತರ ಮನೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ನಂತರ ಮುಂದುವರಿದು ಉತ್ತರ ದಿಕ್ಕಿಗೆ ಕೆ ಶಿವರಾಮ ಕಾರಂತರ ಮನೆ ಇರುತ್ತದೆ ಎಂದರೆ ಅವರ ಮನೆ ಪಕ್ಕ ಇರುತ್ತದೆ ಎಂದು ನುಡಿಯುತ್ತಾರೆ. ಉಮ್ಮಕ್ಕಿ ನಾರಾಯಣ ಪೂಜಾರಿಯವರ ಮನೆ ಮುಂದುವರಿದು ದಕ್ಷಿಣಕ್ಕೆ ಇರುತ್ತದೆ ಎಂದರೆ ಸಾಕ್ಷಿ ದೇವಸ್ಥಾನದ ರಸ್ತೆ ಅಂತ ಹೇಳಿದ್ದಿರಲ್ಲ ಅದೇ ರಸ್ತೆ ಎಂದು ನುಡಿಯುತ್ತಾರೆ. ತದನಂತರ ರಾಮು ಮಡಿವಾಳ್ತಿಯ ಮನೆ ಇರುತ್ತದೆ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ತದನಂತರ ಶ್ರೀನಿವಾಸ ಕಾರಂತರ ಮನೆ ಇರುತ್ತದೆ ಎಂದರೆ ಸರಿ. ಆ ನಂತರ ಮುಂದುವರಿದು ಶೆಟ್ಟಿಗಾರರವರ ಮನೆ ಇರುತ್ತದೆ ಎಂದರೆ ಸರಿ.

7. ಶೆಟ್ಟಿಗಾರರ ಮನೆ ಎದುರುಗಡೆಯಿಂದ ಉತ್ತರಕ್ಕೆ ನರಸಿಂಹ ಮಧ್ಯಸ್ಥರ ಮನೆ ಬರುತ್ತದೆ ಎಂದರೆ ಸಾಕ್ಷಿ ಅಲ್ಲಿ  ನಮ್ಮ ಕುಮ್ಕಿ  ಸ್ಥಳ ಇದೆ ಎಂದು ನುಡಿಯುತ್ತಾರೆ. ಶೆಟ್ಟಿಗಾರರ ಮನೆಯಿಂದ ನಮ್ಮ ಮನೆಗೆ ಹೋಗಲು ಒಂದು  ಸಿಮೆಂಟ್ ಮೋರಿ ಬರುತ್ತದೆ ಎಂದರೆ ಸಾಕ್ಷಿ ನಮ್ಮ ಕುಮ್ಕಿಯಿಂದ ಸಿಮಂಟ್ ರಸ್ತೆ ಇದೆ ಎಂದು ನುಡಿಯುತ್ತಾರೆ.  ಸಾಕ್ಷಿ ಪುನಃ ಅದು ನಮ್ಮ ಖಾಸಗಿ ಸ್ಥಳದಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಮೋರಿ ಸರಕಾರಿ ಪರಂಬೋಕು

ಒ.ಎಸ್.ನಂಬ್ರ಼ 68/2024
ಪಿ.ಡಬ್ಲ್ಯೂ ಃ 1

ತೋಡಿನಲ್ಲಿ ಇರುತ್ತದೆ ಎಂದರೆ ಸರಿ. ಮೋರಿಯ ಪೂರ್ವಕ್ಕೆ ಅಚ್ಯುತ ಪೂಜಾರಿಯ ಮನೆ ಇರುತ್ತದೆ ಎಂದರೆ ಸಾಕ್ಷಿ ನಮ್ಮ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಅಲ್ಲಿ ಅಚ್ಯುತ ಪೂಜಾರಿಯವರ ಸ್ಥಳ ಇರುವುದಿಲ್ಲ. ಸರ್ವೆ ನಂಬ್ರ 174/1, ಅದು ನಮ್ಮ ಸರ್ವೆ ನಂಬ್ರ ಇರುತ್ತದೆ. ಅದು 14 ಸೆಂಟ್ಸ್ ಜಾಗವಿರುತ್ತದೆ.

8. ಪರಂಬೋಕು ತೋಡಿನ ಮೋರಿಯ ದಕ್ಷಿಣಕ್ಕೆ ಶೆಟ್ಟಿಗಾರರವರ ಸ್ಥಳ ಇರುತ್ತದೆ ಎಂದರೆ ಸರಿ. ಶೆಟ್ಟಿಗಾರರ ಸ್ಥಳದ ಪಕ್ಕದಲ್ಲಿ ಅಚ್ಯುತ ಪೂಜಾರಿಯವರ ಸ್ಥಳವೂ ಇದೆ ಎಂದರೆ ಸಾಕ್ಷಿ ಆತನ ಕುಟುಂಬದ್ದು ಇರುತ್ತದೆ, ಆತನದಲ್ಲ ಎಂದು ನುಡಿಯುತ್ತಾರೆ. ಪರಂಬೋಕು ತೋಡಿನ ಮೋರಿಯಿಂದ ಅಚ್ಯುತ ಪೂಜಾರಿಯ ಸ್ಥಳದ ಮುಖಾಂತರ ರಸ್ತೆ ಮುಂದುವರಿದು ಉಮ್ಮಕ್ಕಿ ಬೈಲಿಗೆ ಹೋಗುತ್ತದೆ ಎಂದರೆ ಸಾಕ್ಷಿ ಅಚ್ಯುತ ಪೂಜಾರಿಯ ಜಾಗವೇ ಇಲ್ಲ ಎಂದು ನುಡಿಯುತ್ತಾರೆ. ಶೆಟ್ಟಿಗಾರರವರ ಸ್ಥಳ ಇರುತ್ತದೆ, ಆದರೆ ಅಲ್ಲಿ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಈ ಸಂದರ್ಭದಲ್ಲಿ 4 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ